# ಉಕ್ಕಿನ ಮಹಿಳೆ



ಮುರಿದ ಬೆನ್ನನ್ನು ಜೋಡಿಸಲು ವೈದ್ಯರು ಟೈಟಾನಿಯಂ ಲೋಹ ತುಂಬಿದರು. ಚಿಕಿತ್ಸೆಯಿಂದ ಮರುಹುಟ್ಟು ಪಡೆದ ಅವರನ್ನು ಪಾಕಿಸ್ತಾನದ ಜನ ‘ಉಕ್ಕಿನ ಮಹಿಳೆ’ ಎಂದು ಕರೆದರು.

■ ಪ್ರವೀಣ ಕುಲಕರ್ಣಿ

ಬೇಡವಾದ ಕಾರಣಗಳಿಗೆ ಹೆಚ್ಚು ಸುದ್ದಿಯಾಗುತ್ತಿರುವ ಪಾಕಿಸ್ತಾನದಿಂದ ಒಂದು ಸಕಾರಾತ್ಮಕ ಯಶೋಗಾಥೆಯನ್ನು ಮೊಗೆದು ಕೊಟ್ಟವರು ಮುನಿಬಾ ಮಜಾರಿ. ‘ಪಾಕಿಸ್ತಾನದ ಉಕ್ಕಿನ ಮಹಿಳೆ’ ಎಂಬ ಹೆಗ್ಗಳಿಕೆಗೂ ಪಾತ್ರರಾದವರು ಆಕೆ. ಚಳವಳಿಗಾರ್ತಿ, ಚಿತ್ರ ಕಲಾವಿದೆ, ಸ್ಫೂರ್ತಿದಾಯಕ ಭಾಷಣಗಾರ್ತಿ, ಟಿ.ವಿ. ನಿರೂಪಕಿ, ನಟಿ... ಹೀಗೆ ಬಹುಮುಖ ಪ್ರತಿಭೆಯಾಗಿರುವ ಮುನಿಬಾ ಅವರಿಗೆ ನಡೆದಾಡಲು ಸಾಧ್ಯವಿಲ್ಲ. ಗಾಲಿಕುರ್ಚಿಯೇ ಅವರ ಏಕೈಕ ಸಾಧನ. ಅದರಲ್ಲಿಯೇ ಸಂಚರಿಸುತ್ತಾ ಆಕೆ ತೋರಿರುವ, ತೋರುತ್ತಿರುವ ಸಾಧನೆ ಅಪಾರ. ಮುನಿಬಾ ಅವರ ಸಾಧನೆಯನ್ನು ಕಂಡ ವಿಶ್ವಸಂಸ್ಥೆಯು ಅವರನ್ನು ತನ್ನ ಮಹಿಳಾ ರಾಯಭಾರಿಯನ್ನಾಗಿ ನೇಮಿಸಿಕೊಂಡಿತ್ತು.

ಮುನಿಬಾ ಅವರು ಹುಟ್ಟು ಅಂಗವಿಕಲರೇನೂ ಅಲ್ಲ. ಹದಿಹರೆಯದ ದಿನಗಳಲ್ಲಿ ಬಲೂಚಿಸ್ತಾನದ ಹಳ್ಳಿಯ ಪರಿಸರದಲ್ಲಿ ಸ್ವಚ್ಛಂದವಾಗಿ ಆಡಿ, ಬೆಳೆದವರು. ಕಟ್ಟಾ ಸಂಪ್ರದಾಯವಾದಿ ಬಲೂಚ್ ಕುಟುಂಬದಲ್ಲಿ ಜನಿಸಿದ ಅವರು, 18ರ ಹರೆಯದಲ್ಲೇ ವಿವಾಹ ಬಂಧನಕ್ಕೆ ಒಳಗಾದವರು. ಇಂತಹ ಹಳ್ಳಿ ಹುಡುಗಿ ಟೆಡ್ ಟಾಕ್‌ನಲ್ಲಿ ಸ್ಫೂರ್ತಿದಾಯಕ ಮಾತುಗಳನ್ನು ಆಡುವ ಮಟ್ಟಕ್ಕೆ ಬೆಳೆದದ್ದೇ ಒಂದು ರೋಚಕ ಕಥೆ. ‘ಮದುವೆ ನನಗೆ ಎಂದಿಗೂ ಸಂತಸವನ್ನು ತರಲಿಲ್ಲ’ ಎಂದು ಮುಕ್ತವಾಗಿ ಹೇಳಿದವರು ಆಕೆ. ಪಾಕಿಸ್ತಾನದ ಕ್ವೆಟ್ಟಾದಿಂದ ರಹೀಂ ಯಾರ್ ಖಾನ್‌ಗೆ ಹೋಗುವಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಅವರು, ಬೆನ್ನುಮೂಳೆ ಮತ್ತು ಪಕ್ಕೆಲುಬು ಮುರಿತಕ್ಕೂ ಒಳಗಾದರು. ‘ಅಪಘಾತದಿಂದಾಗಿ ನನ್ನ ಸೊಂಟದಿಂದ ಕೆಳಭಾಗದ ಅವಯವಗಳ ಮೇಲೆ ನನಗೆ ಸ್ವಾಧೀನವೇ ಇಲ್ಲದಾಯಿತು. ಈ ದುರ್ಘಟನೆಯು ಬದುಕಿನ ಕುರಿತ ನನ್ನ ದೃಷ್ಟಿಕೋನವನ್ನೇ ಬದಲಿಸಿತು’ ಎಂದು ಅವರು ಹೇಳುತ್ತಾರೆ.

ಆಸ್ಪತ್ರೆಯಲ್ಲಿ ಹಲವು ತಿಂಗಳವರೆಗೆ ಚಿಕಿತ್ಸೆ ಪಡೆದರು ಮುನಿಬಾ. ಮುರಿದ ಬೆನ್ನನ್ನು ಮರುಜೋಡಿಸಲು ವೈದ್ಯರು ಅವರ ಬೆನ್ನಿನೊಳಗೆ ದೊಡ್ಡ ಪ್ರಮಾಣದಲ್ಲಿ ಟೈಟಾನಿಯಂ ಲೋಹ ತುಂಬಿದರು. ಇಂತಹ ಚಿಕಿತ್ಸೆಯಿಂದ ಮರುಹುಟ್ಟು ಪಡೆದ ಕಾರಣಕ್ಕಾಗಿ ಪಾಕಿಸ್ತಾನದ ಜನ ಅವರನ್ನು ‘ಉಕ್ಕಿನ ಮಹಿಳೆ’ ಎಂದು ಕರೆದರು. ‘ನೀನು ಇನ್ನುಮುಂದೆ ಬಣ್ಣದ ಬ್ರಷ್ ಹಿಡಿಯಲು ಸಾಧ್ಯವಿಲ್ಲ. ನಡೆದಾಡುವ ಅವಕಾಶವೂ ಮುರುಟಿಹೋಗಿದೆ. ನಿನಗೆ ಅಮ್ಮನಾಗುವ ಅವಕಾಶ ಕೂಡ ಇಲ್ಲ...’ ವೈದ್ಯರ ಒಂದೊಂದು ಮಾತಿನಿಂದ ಬದುಕಿನ ಒಂದೊಂದೇ ಅವಕಾಶದ ಬಾಗಿಲು ಮುಚ್ಚುತ್ತಾ ಹೋಗಿದ್ದು ದೃಢಪಟ್ಟರೂ, ಆ ಒಂದೊಂದು ಮಾಹಿತಿ ಮುನಿಬಾ ಅವರನ್ನು ಒಳಗಿನಿಂದಲೇ ಗಟ್ಟಿಮಾಡುತ್ತಾ ಹೋಯಿತು.

‘ಪಾಕಿಸ್ತಾನದಲ್ಲಿ ಮಕ್ಕಳನ್ನು ಹೆರದ ಮಹಿಳೆಯರನ್ನು ಅಪ್ರಯೋಜಕರು ಎಂಬಂತೆ ನೋಡಲಾಗುತ್ತದೆ. ಅಂತಹ ಮಹಿಳೆಯ ಬದುಕು ಅಪರಿಪೂರ್ಣ ಎನ್ನುವ ಮಾತನ್ನು ಚಿಕ್ಕಂದಿನಿಂದಲೇ ಕೇಳುತ್ತಾ ಬೆಳೆದವರು ನಾವು. ಮಗು ಪಡೆಯಲು ಸಾಧ್ಯವಿಲ್ಲ ಎನ್ನುವುದನ್ನು ಅರಗಿಸಿಕೊಳ್ಳಲು ನನಗೂ ಕಷ್ಟವಾಯಿತು. ದಿಕ್ಕು ತೋಚದಂತಹ ಸನ್ನಿವೇಶದಲ್ಲಿ ನನ್ನಮ್ಮ ಹೇಳಿದ, ‘ಎಲ್ಲ ನೋವೂ ಮಾಯವಾಗಿ ಹೋಗಲಿದೆ. ದೇವರು ನಿನಗಾಗಿ ಏನೋ ಯೋಜನೆ ಹಾಕಿಕೊಂಡಿದ್ದಾನೆ’ ಎಂಬ ಮಾತು ನನ್ನಲ್ಲಿ ಭರವಸೆ ಮೂಡಿಸಿತು’ ಎಂದು ಮುನಿಬಾ ಹೇಳುತ್ತಾರೆ.

‘ಬಲವಂತವಾಗಿ ನಾನು ಮುಖದಲ್ಲಿ ನಗು ತಂದುಕೊಳ್ಳುತ್ತಿದ್ದೆ. ನಮ್ಮ ನೋವನ್ನು ಅಡಗಿಸಿಟ್ಟು, ಒಂದು ಹುಸಿ ನಗು ಬೀರುವುದು ತುಂಬಾ ಕಠಿಣ. ನಾನು ಕೈಚೆಲ್ಲಿದರೆ, ನನ್ನ ಅಮ್ಮ, ಸಹೋದರ ಕೂಡ ಧೃತಿಗೆಡುತ್ತಾರೆ ಎನ್ನುವುದನ್ನು ನಾನು ಬಲ್ಲವಳಾಗಿದ್ದೆ. ಅವರು ಕಣ್ಣೀರು ಸುರಿಸುವುದನ್ನು ನೋಡುವುದು ನನಗೆ ಸಾಧ್ಯವೇ ಇರಲಿಲ್ಲ. ಹೀಗಾಗಿ ನನ್ನ ಸಹೋದರನಿಗೆ ಬಣ್ಣದ ಡಬ್ಬಿ ಮತ್ತು ಬ್ರಷ್ ತರಲು ಹೇಳಿದೆ...’ ಮುನಿಬಾ ಅವರು ಹೀಗೆ ಹೇಳುವಾಗ ಎಂಥವರ ಕಣ್ಣಾಲಿಗಳೂ ತುಂಬಿಕೊಳ್ಳುತ್ತವೆ. ವೈದ್ಯರು ಯಾವುದು ಅಸಾಧ್ಯವೆಂದು ಹೇಳಿದ್ದರೋ ಮುನಿಬಾ ಅದನ್ನು ಸಾಧ್ಯವಾಗಿಸಿ ತೋರಿಸಿದರು. ಕ್ಯಾನ್ವಾಸ್ ಮೇಲೆ ಕಷ್ಟಪಟ್ಟು ಚಿತ್ರ ಬಿಡಿಸಿದರು. ಅದಕ್ಕಾಗಿ ದೇಹದ ಮೇಲೆ ಆಗುತ್ತಿದ್ದ ಒತ್ತಡವನ್ನೂ ತಡೆದುಕೊಂಡರು. ಮುನಿಬಾ ಅವರ ಚಿತ್ರಗಳನ್ನು ಕಂಡವರು ‘ಎಂತಹ ವರ್ಣರಂಜಿತ ಕಲೆ’ ಎಂದು ಕೊಂಡಾಡಿದರು. ಆದರೆ, ಆ ಕಲೆಯ ಹಿಂದಿದ್ದ ನೋವನ್ನು ಯಾರೂ ಗುರುತಿಸದಾದರು.

ನಾನೀಗ ಅಂಗವಿಕಲೆ ಎಂಬುದನ್ನು ಒಪ್ಪಿಕೊಂಡ ಮುನಿಬಾ, ಗಾಲಿಕುರ್ಚಿ ಮೇಲೆ ಕುಳಿತರು. ‘ನನಗಾಗಿ ನಾನು ಬದುಕಬೇಕು. ಇನ್ನೊಬ್ಬರ ದೃಷ್ಟಿಯಲ್ಲಿ ಪರಿಪೂರ್ಣ ಮಹಿಳೆಯಾಗುವುದು ನನಗೆ ಬೇಕಿಲ್ಲ. ನನ್ನ ಮಟ್ಟಿಗೆ ನಾನು ಪರಿಪೂರ್ಣ ಮಹಿಳೆಯಾಗಬೇಕು’ ಎಂದು ದೃಢವಾಗಿ ನಿಶ್ಚಯಿಸಿದ ಅವರು, ತಮ್ಮನ್ನು ದೂರವಿಟ್ಟ ಬಾಳಸಂಗಾತಿಗೆ ಡೈವೋರ್ಸ್ ನೀಡಿದರು. ಅನಾಥಾಲಯದಿಂದ ಒಂದು ಮಗುವನ್ನು ದತ್ತುಪಡೆದು ತಂದರು. ‘ಅಂಗವಿಕಲೆಯಾದ ನೀವು ಮಗುವನ್ನು ಹೇಗೆ ಸಾಕುತ್ತೀರಿ’ ಎಂದು ಅನಾಥಾಲಯದವರು ಪ್ರಶ್ನಿಸಿದರೆ, ‘ಸದೃಢ ತಂದೆ–ತಾಯಿಗಿಂತ ಹೆಚ್ಚಿನ ಜತನದಿಂದ ನಾನು ಮಗು ಸಾಕುವೆ’ ಎಂದು ಉತ್ತರಿಸಿದರು. ಮಾಜಿ ಗಂಡ ಮತ್ತೊಂದು ಮದುವೆಯಾದಾಗ ಆತನಿಗೆ ಶುಭಾಶಯ ಹೇಳಿದರು.

‘ನೀವು ಏನಾಗಿದ್ದೀರೋ ಅದನ್ನು ಸ್ವೀಕರಿಸಿ ಮುನ್ನಡೆದರೆ ಜಗತ್ತು ಕೂಡ ನಿಮ್ಮನ್ನು ಗುರುತಿಸುತ್ತಾ ಹೋಗುತ್ತದೆ’ ಎಂದೆನ್ನುವ ಮುನಿಬಾ, ವಿಶ್ವಸಂಸ್ಥೆಯ ರಾಯಭಾರಿಯಾಗಿ ಮಹಿಳೆ ಮತ್ತು ಮಕ್ಕಳ ಹಕ್ಕುಗಳ ಜಾಗೃತಿ ಮೂಡಿಸಲು ಯತ್ನಿಸಿದವರು. ಸ್ತ್ರೀಸಮಾನತೆ ಆಶಯದ ಹಣತೆಯನ್ನು ಹಿಡಿದು ನಡೆದವರು. ಬಿಬಿಸಿಯ ವಿಶ್ವದ ಪ್ರಭಾವಿ ಮಹಿಳೆಯರ ಪಟ್ಟಿಯಲ್ಲೂ ಸ್ಥಾನ ಪಡೆದವರು. ‘ನನ್ನ ನೋವು ಸುಂದರವಾಗಿದೆ. ಏಕೆಂದರೆ, ಅದರಿಂದ ನೂರಾರು ಜನರ ನೋವು ಮರೆಸಲು, ಕಣ್ಣೀರು ಒರೆಸಲು ಸಾಧ್ಯವಾಗಿದೆ’ ಎಂದೆನ್ನುವ ಮುನಿಬಾ ನಿಜಕ್ಕೂ ಉಕ್ಕಿನ ಮಹಿಳೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65